ದೇವರು. ಈ ಜನ್ಮದಲ್ಲಿ ನಿನ್ನ ಉಪಕಾರ ಮರೆಯಲ್ಲ 'ಎಂದಿದ್ದ.

ಅವನ ಎಣಿಕೆ ಸುಳ್ಳಾಗಿತ್ತು. ತನ್ನಷ್ಟೇ ದುಃಖ ಪಡುವಳೆಂದು ತಿಳಿದು ವಿದ್ಯಾಳಲ್ಲಿ ಹೇಳಿದ್ದ. ಅವಳು ತಿರುಗಿ ಬಿದ್ದಿದ್ದಳು. ಘರ್ಷಣೆ ಗಲಾಟೆ ನಡೆದಿದ್ದು ಬಿಟ್ಟರೆ ಉಪಯೋಗ ಕಾಣದಾದಾಗ ಮಾತು ವಿಕೋಪಕ್ಕೆ ಹೋಗಿತ್ತು.

ಗಂಟೆ ಎಂಟು ತೋರಿಸುತ್ತಿತ್ತು. ಕಿಶೋರ್ ಮನೆಯ ಕಡೆ ಗಾಡಿ ಓಡಿಸಿದ. ಮಕ್ಕಳು ಅವನಿಗೆ ಕಾಯುತ್ತಿದ್ದವು. ಗಾಬರಿಯಲ್ಲಿದ್ದವು. ಪೃಥ್ವಿ ಅಳುತ್ತಾ 'ಅಮ್ಮ ಮಧ್ಯಾಹ್ನವೇ ಮನೆಯಿಂದ ಹೋಗಿದ್ದಾಳೆ. ಫೋನ್ ಮಾಡಿದರೆ ಎತ್ತುತ್ತಿಲ್ಲ. ನೀವೂ ಫೋನ್ ಎತ್ತಿಲ್ಲ'ಎಂದು ಅಳತೊಡಗಿದಳು. ಕಿಶೋರನಿಗೆ ದಿಕ್ಕು ತೋಚದಾಯಿತು. ಅವಳು ಟ್ಯೂಶನ್ ಹೇಳುವ ಮಕ್ಕಳ ಮನೆಗೆ ಫೋನ್ ಮಾಡಿದ. ಅಲ್ಲೆಲ್ಲೂ ಹೋಗಿರಲಿಲ್ಲ.

ಏನೆಲ್ಲಾ ಯೋಚನೆಗಳು ತಲೆಯಲ್ಲಿ ಬರ ತೊಡಗಿದವು. ಕಿಶೋರನಿಗೆ ಈಗ ವಿದ್ಯಾ ಇಲ್ಲದಿರುವುದರ ಮುಂದೆ ಶಂಕರನ ಸಮಸ್ಯೆ ಬಹಳ ಚಿಕ್ಕದೆನಿಸಿತು. ಒಮ್ಮೆ ಅವಳು ಬಂದರೆ ಸಾಕು ಇನ್ನೇನೂ ಬೇಡವೆನಿಸಿತು.

ಗೆಳೆಯ ಅರುಣನಿಗೆ ಫೋನ್ ಮಾಡಿದ. ಅವನು 'ಕಂಪ್ಲೇಂಟ್ ಕೊಡುವುದು ಒಳ್ಳೆಯದೆಂದ. ತಾನೂ ಬರುವೆ' ಎಂದ. ಅಷ್ಟರಲ್ಲಿ ಬೆಲ್ಲಾಯಿತು. ಮಕ್ಕಳು ಓಡಿ ಬಾಗಿಲು ತೆಗೆದರೆ ವಿದ್ಯಾ. ಮಕ್ಕಳಿರುವುದೂ ಮರೆತು ಕಿಶೋರ್ ಅವಳನ್ನು ಅಪ್ಪಿದ.

'ನನ್ನ ಕ್ಷಮಿಸು ವಿದ್ಯಾ. ನೀನು ಎಲ್ಲಿ ಹೋದಿಯೆಂದು ಹೆದರಿಬಿಟ್ಟಿದ್ದೆ. ನನಗೆ ನೀನು ಬೇಕು' ಎನ್ನುವಾಗ ಒಡಲೊಳಗೆ ತುಂಬಿದ ದುಃಖ ಒಮ್ಮೆಲೆ ಹೊರ ಬಂದಿತು. ಕಣ್ಣಿನಲ್ಲಿ ನೀರಾಗಿ ಉಕ್ಕಿ ಹರಿಯಿತು.

ವಿದ್ಯಾ ಅವನನ್ನು ಸಮಾಧಾನಿಸಿದಳು. 'ನನಗೇನೂ ಆಗಿಲ್ಲ. ಆಗುವುದನ್ನು ದೇವರು ತಪ್ಪಿಸಿದ' ಎಂದಳು.

ಕೂಗಾಡಿ ಕಿಶೋರ್ ಬೆಳಿಗ್ಗೆ ಹೋದ ಮೇಲೆ ವಿದ್ಯಾಳಿಗೆ ಬಹಳ ನೋವಾಗಿದೆ. ತಾನು ತಪ್ಪು ಮಾಡಿದೆನಾ ಎನಿಸಿ ಯೋಚಿಸಿದ್ದಾಳೆ. ಶಂಕರನ ಸಮಸ್ಯೆ ನಿಜವಿದ್ದರೆ ಅಖಿಲಳಿಗೆ ತಿಳಿಸಿ ಸಲಹೆ ಕೇಳಿದರೆ ಹೇಗೆ ಎನಿಸಿದೆ. ನಂಬರ್ ಹುಡುಕಿ ಫೋನ್ ಮಾಡಿದ್ದಾಳೆ. ಹಳೆಯ ಗೆಳತಿ ಸಿಕ್ಕಾಗ ಸಂಭ್ರಮಿಸುವಂತೆ ಅಖಿಲ ಆತ್ಮೀಯವಾಗಿ ಮಾತಾಡಿದ್ದಾಳೆ. 'ವಿದ್ಯಾ ನಿಮ್ಮಲ್ಲಿ ಮಾತಾಡಬೇಕು ಎಲ್ಲಿ ಸಿಗುತ್ತೀರಾ' ಕೇಳಿ ಒಂದು ಕಾಫಿ ಡೇನಲ್ಲಿ ಇಬ್ಬರೂ ಸೇರಿದ್ದಾರೆ. ವಿದ್ಯಾ ಅವಳಲ್ಲಿ ಶಂಕರ ತನ್ನವರ ಹತ್ತಿರ ಸಹಾಯ ಯಾಚಿಸಿದ್ದು, ತಾನದಕ್ಕೆ ಒಪ್ಪದ್ದಿದ್ದುದು ಹೇಳಿ 'ತಮಗಿರುವ ಮಕ್ಕಳಿಗೆ ಓದಲೆಂದು ತೆಗೆದಿಟ್ಟ ಹಣ ಅವರ ತಾತನದು. ಅದು ಕೈ ತಪ್ಪಿದರೆ ಎಂದು ಭಯವಾಯಿತು ಎಂದಿದ್ದಾಳೆ. ಅದೊಂದೇ ನಮ್ಮಲ್ಲಿರುವುದು ಅಖಿಲಾ. ಇವರು ಕೋಪಿಸಿ ಕೊಂಡು ಹೋಗಿದ್ದಾರೆ' ಎಂದಳು.

ಅಖಿಲ 'ನಾನು ಕೇಳಿದ್ದಕ್ಕೆ ಸತ್ಯ ಹೇಳುತ್ತೀರಾ' ಎಂದಾಗ ವಿದ್ಯಾ ಗೋಣಳ್ಳಾಡಿಸಿದ್ದಾಳೆ. 'ಹೇಳಿ ಶಂಕರ ಕಿಶೋರನ ಸ್ನೇಹ ಎಂದಿನಿಂದ? ಎಲ್ಲವನ್ನೂ ಹೇಳಿ' ಎಂದಾಗ ಶಂಕರ ಸಿಕ್ಕಿದ ಸಂದರ್ಭ, ಅವನು ಮನೆಗೆ ಬಂದಲ್ಲಿಂದ ಅವನು ಹೇಳಿದ್ದೆಲ್ಲವನ್ನೂ ಹೇಳಿದಳು.

ಅಖಿಲ ತನ್ನ ಮೊಬೈಲ್‌ನಲ್ಲಿ ತನ್ನ ಶಂಕರನ ಮದುವೆ ಫೋಟೋ ವಿದ್ಯಾಳಿಗೆ ತೋರಿಸಿ 'ಇವರು ನನ್ನ ಪಪ್ಪ ಅಮ್ಮ. ಇವರು ಶಂಕರನ ಪಪ್ಪ ಅಮ್ಮ' ಎಂದಾಗ ವಿದ್ಯಾಳಿಗೆ ಶಾಕ್.

ಅಖಿಲ ತಮ್ಮ ಮದುವೆ ಆದಲ್ಲಿಂದ ಇಂದಿನ ತನಕ ನಡೆದದ್ದು ಹೇಳಿದ್ದಾಳೆ. 'ಶಂಕರನಿಗೆ ಅನೇಕ ಕೆಟ್ಟ ಹವ್ಯಾಸಗಳಿವೆ. ತಂದೆ ತಾಯಿ ಹತ್ತಿರ ಜಗಳವಾಡಿ ತನ್ನ ಪಾಲಿಂದ ಹಣ ತೆಗೆದು ಖರ್ಚು ಮಾಡಿದ್ದಾನೆ. ಈಗೊಂದು ಹೆಣ್ಣಿನ ಸಹವಾಸ ದಲ್ಲಿ ಸಿಕ್ಕಿಬಿದ್ದಿದ್ದಾನೆ. ಅವಳಿಂದ ಬಿಡುಗಡೆಗೆ ಹಣ ಬೇಕಿದೆ. ಅವನು ಅದಕ್ಕಾಗಿ ನಿಮಗೆ ಬಲೆ ಒಡ್ಡಿದ್ದಾನೆ. ನೀವು ಅವನೂರಿನವರೆಂದು ನನಗೆ ಗೊತ್ತಿಲ್ಲ. ಇಲ್ಲದಿದ್ದರೆ ನಾನೇ ನಿಮಗೆ ಅವನ ವಿಚಾರ ಹೇಳಿ ಜಾಗ್ರತೆ ಇರಿ ಎನ್ನುತ್ತಿದ್ದೆ. ನನ್ನ ಮಾತಿನಲ್ಲಿ ನಂಬಿಕೆ ಇರದಿದ್ದರೆ ಇದು ಅವನ ಪಪ್ಪನ ಫೋನ್ ನಂಬರ್ ವಿಚಾರಿಸಿಕೊಳ್ಳಿ. ನಾನು ಒಂದು ಶಾಲೆಯಲ್ಲಿ ಟೀಚರ್ ಆಗಿದ್ದೇನೆ. ಅಲ್ಲಿಯ ನಂಬರ್ ತೆಗೆದುಕೊಳ್ಳಿ'.

ವಿದ್ಯಾ ಅವಳ ಕೈಹಿಡಿದು 'ನಿಮ್ಮಿಂದ ನನ್ನ ಸಂಸಾರ ಉಳಿಯಿತು' ಎಂದಳು.

'ನನ್ನದಂತೂ ಹಾಳಾಯಿತು ವಿದ್ಯಾ. ನನಗೆ ಗೊತ್ತಾದವರಿಗೆ ನಾನೇ ಹೇಳುತ್ತೇನೆ. ನಿಮ್ಮ ಸ್ನೇಹ ಮಾಡಲು ಅವಕಾಶ ಕೊಡಲಿಲ್ಲ, ನೀವು ಊರು ಬಿಟ್ಟಿದ್ದೀರಂತ ಹೇಳಿದ್ದ'ಎಂದು ಅಖಿಲ ಹೇಳಿದಳು.

ವಿದ್ಯಾ ಹೇಳುತ್ತಿದ್ದುದನ್ನು ಕೇಳುತ್ತಾ ಕಿಶೋರನಿಗೆ ದಿಗ್ಭ್ರಮೆ ಆಗಿದೆ. ತನ್ನ ನಂಬಿಕೆಗೆ ದೊಡ್ಡ ಪೆಟ್ಟು ಬಿದ್ದಿದೆ. ಮನುಷ್ಯನ ಸ್ವಭಾವ ಅವನ ನಡತೆ ಗುಣಗಳು ಮುಖದಲ್ಲಿ ಗೋಚರಿಸುತ್ತವೆ.

ಶಂಕರ ಮುಖವಾಡ ತೊಟ್ಟವನೆಂದೂ ಅವನೊಳಗಿನ ಮೋಸ ವಂಚನೆಯನ್ನು ಸ್ವಲ್ಪವೂ ತೋರಿಸದಷ್ಟು ನಟನಾ ಸಾಮರ್ಥ್ಯವನ್ನು ಹೊಂದಿದನೆಂದೂ ಅರಿಯದ ತನ್ನ ಮೇಲೇ ಬೇಸರವಾಗುತ್ತಿದೆ. ಹಾಗೇ ಹೆಂಡತಿಯಲ್ಲಿ ಅಭಿಮಾನ ಉಕ್ಕುತ್ತಿದೆ.

ಅಂದಿನಿಂದ ಕಿಶೋರ ಅವರ ಮನೆಗೆ ಬಂದಿಲ್ಲ ಅದಕ್ಕೆ ಕಾರಣ ಅಖಿಲ ಎಂದು ಅರಿತಿದ್ದಾರೆ. ಹೇಗೆಂಬುದು ಇಬ್ಬರಿಗೂ ಬೇಕಿಲ್ಲ.

ಒಟ್ಟಾಗಿ ನಡೆಸುತ್ತಿದ್ದ ಹರಿಗೋಲಿಗೆ ಆಕಸ್ಮಿಕವಾಗಿ ಬಂದ ಬಿರುಗಾಳಿಗೆ ಜೀವನ ದೋಣಿ ಮುಳುಗುವುದರಲ್ಲಿದ್ದುದನ್ನು ಅಖಿಲ ದೇವರಂತೆ ಬಂದು ಕಾಪಾಡಿದ್ದಾಳೆ. ದಿನಕ್ಕೊಮ್ಮೆಯಾದರೂ ವಿದ್ಯಾ ಅವಳನ್ನು ಮನಸ್ಸಲ್ಲೇ ನಮಸ್ಕರಿಸುತ್ತಾಳೆ. ■

# ಆಪರೇಶನ್ ಥಿಯೇಟರ್‌ನಲ್ಲಿ ಹಸು

■ ಡಾ. ಸಲೀಮ್ ನದಾಫ್

ನಾನು ಓದಿದ್ದು ಗಡಿಭಾಗದ ಪ್ರಸಿದ್ಧ ವೈದ್ಯಕೀಯ ವಿಶ್ವವಿದ್ಯಾಲಯದ ಬೃಹತ್ ಆಸ್ಪತ್ರೆ ಅದು. ಏಕಕಾಲಕ್ಕೆ ಸುಮಾರು ಸಾವಿರ ಒಳರೋಗಿಗಳಿಗೆ ಚಿಕಿತ್ಸೆ ನೀಡುವ ಕೇಂದ್ರ. ಚಿಕ್ಕ ಕಾಂಕ್ರೀಟ್‌ನ ಊರಿನಂತಿದ್ದ ಆಸ್ಪತ್ರೆಯಲ್ಲಿ ಧನ್ವಂತರಿಯೇ ಏಕಕಾಲಕ್ಕೆ ಗಂಡು ಹೆಣ್ಣುಗಳ ನೂರಾರು ಅವತಾರ ಪಡೆದು ವೈದ್ಯ ಶುಶ್ರೂಷಕಿಯಾಗಿ ಸಾವಿರಾರು ರೋಗಿಗಳಿಗೆ ಚಿಕಿತ್ಸೆ ನೀಡುತಿದ್ದ ಆರೋಗ್ಯ ದೇವಾಲಯವದು.

ದೇವಾಲಯದ ಗರ್ಭಗುಡಿಯಂತಹ ಶಸ್ತ್ರಚಿಕಿತ್ಸಾ ಸಂಕೀರ್ಣವು ಒಂದು ವಠಾರದಂತೆ, ಬೇರೆ ವಿಶೇಷತೆಯ ಹಲವಾರು ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಹೊಂದಿತ್ತು. ತಲೆ ಮೆದುಳಿಗೆ ಕೈಹಾಕುವವರಿಂದ ಹಿಡಿದು ಹೊಟ್ಟೆಯ ಆಳಕ್ಕಿಳಿದು ಜಠರ ಕರುಳು ಕಿಡ್ನಿಗಳನ್ನು ಜಾಲಾಡುವ, ಮುರಿದ ಕೈಕಾಲುಗಳ ಮೂಳೆಗಳನ್ನು ಜೋಡಿಸಿ ಯಾವ ಅಂಕುಡೊಂಕಿಲ್ಲದಂತೆ ತಿದ್ದಿ ನಡೆಸುವ ಕುಶಲ ವೈದ್ಯರ ತಂಡವೇ ಅಲ್ಲಿತ್ತು.

'ಗೌಡ್ರೆ ಏನ್ ಬೆಳೆ..? ರಾಗಿ ಎಷ್ಟು ಬೆಳೆದದ್ದೀರಿ ಈ ಸಲ..?

ಅಜ್ಜಿ ಮಕ್ಕಳೆಷ್ಟು ...ಮೊಮ್ಮಕ್ಕಳೆಷ್ಟು ...?

'ಪುಟ್ಟಾ ಒನ್ ಟೂ ತ್ರೀ ಹೇಳು.' ಎನ್ನುತ್ತ ಆಯಾ ವಯಸ್ಸಿಗೆ ತಕ್ಕಂತೆ ಶಸ್ತ್ರಚಿಕಿತ್ಸೆಗೆ ಬಂದ ರೋಗಿಗಳ ಆತಂಕ ನಿವಾರಿಸಲು ಲೋಕಾಭಿರಾಮವಾಗಿ ಪ್ರಶ್ನೆಗಳನ್ನು ಕೇಳುತ್ತಾ ಮೈಮರೆಸಿ ನೋಡ ನೋಡುತಿದ್ದಂತೆ, ಮುಸುಕುಧಾರಿ ವೈದ್ಯರು ದಾದಿ ಯರನ್ನು ಕಂಡು ಭಯದಿಂದ ಪತರಗುಟ್ಟಿದ ರೋಗಿ ಗಳನ್ನು ಪ್ರಜ್ಞೆ ತಪ್ಪಿಸಿ ಮಲಗಿಸುವ ಚಾಣಾಕ್ಷ ಅರಿವಳಿಕೆ ತಜ್ಞರು ಶಸ್ತ್ರಚಿಕಿತ್ಸಾ ತಂಡವನ್ನು ಪರಿಪೂರ್ಣಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಮೇಲ್ನೋಟಕ್ಕೆ ಕೇವಲ ಶಸ್ತ್ರಚಿಕಿತ್ಸೆಯ ಫಲಗಳು ಕಂಡುಬಂದು ಜನರು ಕೇವಲ ಶಸ್ತ್ರಚಿಕಿತ್ಸಕರನ್ನು ಶ್ಲಾಘಿಸುತ್ತಾರೆ, ಶಸ್ತ್ರಚಿಕಿತ್ಸೆಯಲ್ಲಿ ಅಷ್ಟೇ ಪ್ರಮುಖ ಪಾತ್ರ ವಹಿಸಿದ ಅರಿವಳಿಕೆ ತಜ್ಞರ ಕೊಡುಗೆ ಯಾರಿಗೂ ಕಂಡುಬರುವುದಿಲ್ಲ. ಅರಿವಳಿಕೆಯ ಕೆಲಸ ಶಸ್ತ್ರಚಿಕಿತ್ಸೆಯಷ್ಟೆ ಕ್ಲಿಷ್ಟಕರವಾದುದು. ರೋಗ, ವಯಸ್ಸು, ಶಸ್ತ್ರಚಿಕಿತ್ಸೆ ಮಾಡಬೇಕಾದ ದೇಹದ ಭಾಗಗಳನ್ನು ಗಮನದಲ್ಲಿಟ್ಟು ಜನರಲ್ ಹಾಗೂ ಸ್ಪೈನಲ್ ಅನಸ್ತೇಸಿಯಾ ಎಂಬ ಹಲವಾರು ಪ್ರಕಾರ